ಇ) ಮುಂದಿನ ಸಾಲಿಗೆ ಲಭ್ಯವಾಗುವ ಅನುದಾನವನ್ನು ಆಧರಿಸಿ ಮನೆಗಳ ಸಂಖ್ಯೆಯನ್ನು ನಿರ್ಧರಿಸಲಾಗುವುದು

144 (229) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಾದ್ಯಂತ ಮುಜರಾಯಿ ಇಲಾಖೆಗೆ ಸೇರಿದ ಎಲ್ಲಾ ದೇವಸ್ಥಾನಗಳಲ್ಲಿರುವ ಅರ್ಚಕ ಹಾಗೂ ಇತರೇ ಸಿಬ್ಬಂದಿಗಳ ಒಟ್ಟು ಸಂಖ್ಯೆ ಎಷ್ಟು (ದೇವಸ್ಥಾನವಾರು, ಅರ್ಚಕರವಾರು ಹಾಗೂ ಸಿಬ್ಬಂದಿವಾರು ಮಾಹಿತಿ ನೀಡುವುದು) ,

ಆ) ಈ ದೇವಸ್ಥಾನಗಳಲ್ಲಿರುವ ಅರ್ಚಕರ ಹಾಗೂ ಸಿಬ್ಬಂದಿಗಳ ರಾಜ್ಯ ಸಂಘಟನೆಯವರು ಸರ್ಕಾರದ ಮುಂದೆ ಇಟ್ಟಿರುವ ಬೇಡಿಕೆಗಳೇನು ,

ಇ) ಈ ಬೇಡಿಕೆಗಳ ಪೈಕಿ ಈಗಾಗಲೇ ಈಡೇರಿಸಿರುವ ಬೇಡಿಕೆಗಳು ಯಾವುವು ,

ಈ) ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಯಾವ ಕ್ರಮವಹಿಸಿದೆ?

ಶ್ರೀ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ಸಂಖ್ಯೆ 34194 ಈ ದೇವಸ್ಥಾನಗಳಲ್ಲಿರುವ, ಸಂಸ್ಥೆವಾರು ಅರ್ಚಕವಾರು ಹಾಗೂ ಇತರೆ ಸಿಬ್ಬಂದಿವಾರು ವಿವರಗಳು ತಕ್ಷಣದಲ್ಲಿ ಲಭ್ಯವಿಲ್ಲ ಅದನ್ನು ಕ್ರೂಢೀಕರಿಸಿ ಮಾನ್ಯ ಸದಸ್ಯರಿಗೆ ಒದಗಿಸಲಾಗುವುದು

ಆ) ದಿನಾಂಕ 24 6 99ರಲ್ಲಿ ಅಖಿಲ ಭಾರತ ಹಿಂದು ದೇವಾಲಯಗಳ ಅರ್ಚಕರ, ಆಗಮಿಕರ, ಉಪಾಧಿವಂತರ ಒಕ್ಕೂಟದವರು ಅರ್ಚಕರ ಬೃಹತ್ ವಿಧಾನಸೌಧ ಚಲೋ ಸಂದರ್ಭದಲ್ಲಿ ಸರ್ಕಾರದ ಮುಂದೆ ಇಟ್ಟಿರುವ ಪ್ರಮುಖ ಬೇಡಿಕೆಗಳು ಕೆಳಕಂಡಂತೆ ಇದೆ –

1) ತಸ್ಧೀಕ್‌ನ್ನು ಹೆಚ್ಚಿಸುವುದು

2) ಏಕರೂಪಶಾಸನ ಜಾರಿಗೆ ತರುವುದು

3) ಗ್ರಾಮಗಳಲ್ಲಿ ಅರ್ಚಕರು ಮತ್ತು ಸಿಬ್ಬಂದಿಯವರಿಗೆ ಅಗುತ್ತಿರುವ ಕಿರುಕುಳಗಳಿಗೆ ಪೊಲೀಸ್ ರಕ್ಷಣೆ

4) ತಸ್ಧೀಕ್ ಅಂತಿಮಗೊಳಿಸದೇ ಇರುವ ಸಂಸ್ಥೆಗಳಿಗೆ ಕೂಡಲೇ ತಸ್ಧೀಕ್ ನಿಗಧಿಪಡಿಸುವುದು

5) ಭಾವಚಿತ್ರವುಳ್ಳ ಗುರುತು ಚೀಟಿಗಳನ್ನು ಅರ್ಚಕರಿಗೆ ಮತ್ತು ಸಿಬ್ಬಂದಿವರ್ಗದವರಿಗೆ ವಿತರಿಸುವುದು

6) ಮುಜರಾಯಿ ಇಲಾಖೆಯನ್ನು ಕಂದಾಯ ಇಲಾಖೆಯಿಂದ ಬೇರ್ಪಡಿಸುವುದು

7) ಸಂಭಾವನೆ ಮತ್ತು ತಸ್ಧೀಕ್ ಮೊತ್ತವನ್ನು ಸಂಬಂಧಿಸಿದವರಿಗೆ ಪಾವತಿಸಲು ಒಂದು ನಿಗಧಿತ ದಿನಾಂಕ ನಿಗಧಿಪಡಿಸಿ ಅರ್ಚಕರು ಮತ್ತು ಸಿಬ್ಬಂದಿವರ್ಗದವರು ಆನೇಕ ಬಾರಿ ಅಲೆಯುವುದನ್ನು ತಪ್ಪಿಸುವುದು

8) ದೇವಾಲಯಗಳ ವಿದ್ಯುಚ್ಚಕ್ತಿ ಹಣವನ್ನು ಮುಜರಾಯಿ ಇಲಾಖೆಯಿಂದಲೇ ಭರಿಸುವುದು

9) ಮುಜರಾಯಿ ಇಲಾಖೆಯಿಂದ ಜಿಲ್ಲೆಗೊಂದು ಆಗಮ ಪಾರಶಾಲೆ ತೆರೆಯುವುದು ಮತ್ತು ಆಗಮ ಪರೀಕ್ಷೆಯಲ್ಲಿ ಪಾಸಾಗದವರಿಗೆ ಮೂರು ವರ್ಷ ಕಾಲಾವಕಾಶ ನೀಡುವುದು

ಇ) ಅರ್ಚಕರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಕೈಗೊಂಡ ಕ್ರಮ ಕೆಳಕಂಡಂತೆ ಇದೆ

1) ವಾರ್ಷಿಕ ರೂ 6000 00ಗಳಿಗಿಂತ ಕಡಿಮೆ ತಸ್ಧೀಕ್ ಪಡೆಯುತ್ತಿರುವ ದೇವಾಲಯಗಳ ತಸ್ಧೀಕ್‌ನ್ನು ಸರ್ಕಾರದ ಆದೇಶ ಸಂಖ್ಯೆ ಕಂಇ 3 ಮುತಬ / 2003 ದಿನಾಂಕ 16 6 2006ರಲ್ಲಿ ರೂ 6000–00ಗಳಿಗೆ ಕಚ್ಚಿಸಲಾಗಿದೆ ಮತ್ತು 2006–07ನೇ ಸಾಲಿನ ಆಯವ್ಯಯದಲ್ಲಿ ತಸ್ಧೀಕ್ ಪಾವತಿಗಾಗಿ ರೂ 21,24,48,000–00 ಗಳನ್ನು ಒದಗಿಸಿದೆ

2) ದಿ 1 5 2003 ರಲ್ಲಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ದರ್ಮದಾಯ ದತ್ತಿಗಳ ಅಧಿನಿಯಮ 1997ನ್ನು ಜಾರಿಗೆ ತರಲಾಯಿತು ಸದರಿ ಕಾಯ್ದೆಯನ್ನು ಕರ್ನಾಟಕ ರಾಜ್ಯ ಮಾನ್ಯ ಉಚ್ಚನ್ಯಾಯಾಲಯವು ದಿ 8 9 2006 ರಂದು ಅನೂರ್ಚಿತಗೊಳಿಸಿರುತ್ತದೆ ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ 8 9 2006ರ ತೀರ್ಪಿಗೆ ತಡೆಯಾಜ್ಞೆ ಕೋರಿ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್ ಎಲ್ ಪಿ ಯನ್ನು ದಾಖಲಿಸಿದ್ದು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣವು ವಿಚಾರಣೆಗೆ ಬರುವುದನ್ನು ನಿರೀಕ್ಷಿಸಲಾಗಿದೆ

3) ಪ್ರತಿ ತಾಲ್ಲೂಕಿನ ಮುಜರಾಯಿ ಅಧಿಕಾರಿಗಳು ಹಾಗೂ ತಾಲ್ಲೂಕು ದಂಡಾಧಿಕಾರಿಗಳು, ತಹಶೀಲ್ದಾರ್ ರವರಾಗಿದ್ದು, ನಿರ್ದಿಷ್ಟ

ದೂರುಗಳು ಬಂದಲ್ಲಿ ದೇವಾಲಯದ ಆಸ್ತಿ ಮತ್ತು ಅರ್ಚಕರುಗಳಿಗೆ ರಕ್ಷಣೆ ಒದಗಿಸಲು ಕ್ರಮ ಜರುಗಿಸಲಾಗುತ್ತಿದೆ

4) ಇನಾಂ ಜಮೀನುಗಳನ್ನು ಹೊಂದಿದ ಸಂಸ್ಥೆಗಳಿಗೆ ಈಗಾಗಲೇ ಶೇಕಡಾ 99 ರಷ್ಟು ಸಂಸ್ಥೆಗಳಿಗೆ ತಸ್ಫೀಕ್ ನಿಗಧಿ ಪಡಿಸಲಾಗಿದೆ ವಿವಾದವಿರುವ ಪ್ರಕರಣಗಳು ಮಾತ್ರ ತಸ್ಫೀಕ್ ನಿಗಧಿಗೆ ಬಾಕಿ ಇರುತ್ತದೆ ಅರ್ಚಕರ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಚರ್ಚಿಸುವ ಸಲುವಾಗಿ ಕೇಂದ್ರ ಕಛೇರಿಯಲ್ಲಿ ಕರೆದಿದ್ದ ಸಭೆಯಲ್ಲಿ ಗ್ರಾಮೀಣಪ್ರದೇಶದ ಸಂಸ್ಥೆಗಳಿಗೆ ಅಂತಿಮ ತಸ್ಫೀಕ್ ನಿಗಧಿಪಡಿಸಲು ಬಾಕಿ ಇರುವುದು ಸಭೆಯ ಗಮನಕ್ಕೆ ಬಂದಾಗ ಈ ಬಗ್ಗೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ತಿಳುವಳಿಕೆ ನೀಡಿ, ಬಾಕಿ ಇರುವ ಸಂಸ್ಥೆಗಳಿಗೆ ಕೂಡಲೇ ಅಂತಿಮ ತಸ್ಫೀಕ್ ನಿಗದಿ ಪಡಿಸಲು ಸೂಚನೆಗಳನ್ನು ನೀಡಲಾಗಿರುತ್ತದೆ

5) ಇಲಾಖಾ ವ್ಯಾಪ್ತಿಯಲ್ಲಿ ಬರುವ ದೇವಾಲಯಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅರ್ಚಕರು ಮತ್ತು ಇತರೆ ಸಿಬ್ಬಂದಿಯವರುಗಳಿಗೆ ಬಾವಚಿತ್ರ ಮತ್ತು ವಿಳಾಸವನ್ನು ಒಳಗೊಂಡಂತೆ ಗುರುತಿನ ಚೀಟಿಯನ್ನು ಆಯಾ ದೇವಾಲಯಗಳ ನಿಧಿಯಿಂದ ವೆಚ್ಚಗಳನ್ನು ಭರಿಸಿ ನೀಡಲು ಈ ಕಛೇರಿ ಸುತ್ತೋಲೆ ಸಂಖ್ಯೆ ಎಡಿಎಂlಸಿಆರ್ 141 93–94 ದಿ 25 2 2000 ರಲ್ಲಿ ಮಂಜೂರಾತಿ ನೀಡಲಾಗಿರುತ್ತದೆ

6) ಈ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಲಾಗುತ್ತಿದೆ

7) ಇಲಾಖಾ ವ್ಯಾಪ್ತಿಗೆ ಒಳಪಟ್ಟ ದೇವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕಾದಿ ನೌಕರರಿಗೆ ಪಾವತಿಸಬೇಕಾದ ವೇತನ ಮತ್ತು ಇತರೆ ಪಾವತಿಗಳನ್ನು ಯಾವುದೇ ವಿಳಂಬಕ್ಕೆ ಅವಕಾಶ ನೀಡದೆ ಪಾವತಿಸಲು ಈಗಾಗಲೇ ಹಲವಾರು ಸುತ್ತೋಲೆಗಳ ಮೂಲಕ ಸ್ಥಳೀಯ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ವಿಳಂಬವಾಗುತ್ತಿರುವ ಬಗ್ಗೆ ನಿರ್ಧಿಷ್ಟ ದೂರುಗಳು ಕೇಂದ್ರ ಕಛೇರಿಗೆ ಬಂದ ಸಂದರ್ಭಗಳಲ್ಲಿ ಅವುಗಳಿಗೆ ಕೂಡಲೇ ಸ್ಪಂಧಿಸಿ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ತಹಸೀಲ್ದಾರರುಗಳಿಗೆ ಕಟ್ಟುನಿಟ್ಟಾದ ಸೂಚನೆಗಳು ನೀಡಲಾಗುತ್ತಿದೆ

8) ದೇವಾಲಯಗಳ ವಿದ್ಯುಚ್ಛಕ್ತಿ ವೆಚ್ಚವನ್ನು ಆಯಾಯ ದೇವಾಲಯಗಳ ನಿಧಿಯಿಂದ ಅಥವಾ ಭಕ್ತಾಧಿಗಳಿಂದ ಸಹಕಾರದಿಂದ ಭರಿಸುತ್ತಿದ್ದು ಇಲಾಖಾ ವತಿಯಿಂದ ಭರಿಸಲು ಅವಕಾಶವಿರುವುದಿಲ್ಲ

9) ಪ್ರಸ್ತುತ ಇಲಾಖಾ ವ್ಯಾಪ್ತಿಯಲ್ಲಿ ಸರ್ಕಾರಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಮತ್ತು ಮೇಲುಕೋಟೆ ಸಂಸ್ಕೃತ ಕಾಲೇಜಿನಲ್ಲಿ ಆಗಮ ಶಿಕ್ಷಣ ನೀಡಲಾಗುತ್ತಿದೆ ಅಲ್ಲದೆ ರಾಜ್ಯದಲ್ಲಿ ಒಟ್ಟು 27 ಖಾಸಗಿ ಸಂಸ್ಥೆಗಳಲ್ಲಿ ಆಗಮ ಶಿಕ್ಷಣ ನೀಡಲು ಮಾನ್ಯತೆ ನೀಡಲಾಗಿದೆ ಆಸಕ್ತಿಯುಳ್ಳವರು ಇದರ ಸದುಪಯೋಗವನ್ನು ಪಡೆದುಕೊಳ್ಳಬಹುದಾಗಿದೆ

ಈ) ಪ್ರಶ್ನೆ 3ಕ್ಕೆ ಉತ್ತರಿಸಿದಂತೆ

145 (230) ಶ್ರೀ ಶಂಕಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಮೈಸೂರು ನಗರದಲ್ಲಿ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳು ಹಾಗೂ ಛತ್ರಗಳೆಷ್ಟು (ಆಸ್ತಿಗಳೊಂದಿಗೆ ವಿವರ ನೀಡುವುದು),

ಆ) ದೇವಸ್ಥಾನ ಮತ್ತು ಛತ್ರಗಳ ಕಟ್ಟಡಗಳ ವಿಸ್ತೀರ್ಣ, ಆಸ್ತಿಗಳ ವಿವರಗಳೇನು ,

ಇ) ದೇವಸ್ಥಾನಗಳ ಮತ್ತು ಛತ್ರಗಳ ಜೀರ್ಣೋದ್ಧಾರ ಆಸ್ತಿಗಳ ರಕ್ಷಣೆಗೆ ಹಾಗೂ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ,

ಈ) ಇಲ್ಲದಿದ್ದಲ್ಲಿ, ಕ್ರಮ ಕೈಗೊಳ್ಳಲಾಗುವುದೇ , ಇದಕ್ಕಾಗಿರುವ ಯೋಜನಾ ವೆಚ್ಚವೆಷ್ಟು (ವಿವರ ನೀಡುವುದು) ?

ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ಮೈಸೂರು ನಗರದಲ್ಲಿ ಶ್ರೀ ಚಾಮುಂಡೇಶ್ವರಿ ದೇವಾಲಯ ಹಾಗೂ ಇದಕ್ಕೆ ಸೇರಿದ 22 ಅರಮನೆಗೆ ಸೇರಿದ ಮುಜರಾಯಿ ಸಂಸ್ಥೆಗಳೂ ಸೇರಿದಂತೆ ಒಟ್ಟು 58 ದೇವಾಲಯಗಳು ಇರುತ್ತವೆ

ವಿವರ ಅನುಬಂಧ–1, ಮತ್ತು 11 ರಲ್ಲಿ ಲಗತ್ತಿಸಿದೆ

ಮೈಸೂರು ನಗರದಲ್ಲಿ ಈ ಕೆಳಕಂಡಂತೆ 4 ಛತ್ರಗಳು ಇರುತ್ತವೆ

1) ಶ್ರೀ ನಂಜರಾಜ ಬಹದ್ದೂರ್ ಛತ್ರ – ವಿನೋಬ ರಸ್ತೆ, ಮೈಸೂರು

2) ಶ್ರೀ ಬೊಮ್ಮಯ್ಯ ಛತ್ರ – ಹಳೇ ಸಂತೇಪೇಟೆ, ಮೈಸೂರು

3) ಶ್ರೀ ಚಿಕ್ಕಮುನಿಸ್ವಾಮಿ ಛತ್ರ – ಅಶೋಕ ರಸ್ತೆ, ಮೈಸೂರು

4) ಶ್ರೀ ಮನ್ ಮಹಾರಾಜ ಛತ್ರ – ಮೈಸೂರು